159ಲಿ ೮
56

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎಸ್. ನವೀನ್ ಇವರ ನಿಯಮ-330 ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ಪ್ರಶ್ನೆ:-**

ಚಿತ್ರದುರ್ಗ ನಗರದ ಬರುಜನಹಟ್ಟಿಯಲ್ಲಿರುವ ಗರಡಿ ಮನೆ ಯುವಕರ ಸಂಘ (ರಿ) ಹಲವಾರು ವರ್ಷಗಳಿಂದ ಯುವಕರಿಗೆ ಸಾಂಪ್ರದಾಯಿಕ ಗರಡಿ ತರಬೇತಿ ಹಾಗೂ ದೈಹಿಕ ಕಸರತ್ತುಗಳ ತರಬೇತಿ ನೀಡುತ್ತಾ, ನಮ್ಮ ನಾಡಿನ ಪಾರಂಪರಿಕ ಗರಡಿ ಸಂಸ್ಕೃತಿಯನ್ನು ಉಳಿಸಿಕೊಂಡು ಬರುತ್ತಿದೆ. ಆದರೆ ಪ್ರಸ್ತುತ ಗರಡಿ ಮನೆಯಲ್ಲಿ ಬಳಸಲಾಗುತ್ತಿರುವ ಸಾಂಪ್ರದಾಯಿಕ ಕಸರತ್ತು ಹಾಗೂ ವ್ಯಾಯಾಮ ಸಾಮಾಗ್ರಿಗಳು ಹಳೆಯದಾಗಿ ಹಾಳಾಗಿದ್ದು, ಇಂದಿನ ಕಾಲಕ್ಕೆ ಅಗತ್ಯವಿರುವ ಆಧುನಿಕ ವ್ಯಾಯಾಮ ಮತ್ತು ದೈಹಿಕ ತರಬೇತಿ ಸಾಮಗ್ರಿಗಳ ಕೊರತೆ ಇದೆ. ಇಂತಹ ಪಾರಂಪರಿಕ ಗರಡಿ ಮನೆಗಳು ಕ್ರಮೇಣ ನಶಿಸುತ್ತಿರುವ ಸಂದರ್ಭದಲ್ಲಿ, ಬುರುಜನಹಟ್ಟಿ ಗರಡಿ ಮನೆಯನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸುವ ಬಗ್ಗೆ.

**ಉತ್ತರ:-**

ಸದರಿ ಗರಡಿ ಮನೆಯ ಕಟ್ಟಡವನ್ನು ಅಭಿವೃದ್ಧಿಪಡಿಸಲಾಗಿದ್ದು, ಕಟ್ಟಡದಲ್ಲಿ ಇರುವ ಸಾಂಪ್ರದಾಯಿಕ ಕಸರತ್ತು ಹಾಗೂ ವ್ಯಾಯಾಮ ಸಾಮಗ್ರಿಗಳು ಹಾಳಾಗಿರುವುದು ಸ್ಥಳ ಪರಿಶೀಲನೆಯಿಂದ ತಿಳಿದುಬಂದಿರುತ್ತದೆ. ಹಾಗಾಗಿ ಸದರಿ ಗರಡಿ ಮನೆಗೆ ಹೊಸದಾಗಿ ಆಧುನಿಕ ವ್ಯಾಯಾಮ ಮತ್ತು ದೈಹಿಕ ತರಬೇತಿ ಸಾಮಗ್ರಿಗಳನ್ನು ಒದಗಿಸಲು 2026-27ನೇ ಸಾಲಿನಲ್ಲಿ 'ಯುವಶಕ್ತಿ ಕೇಂದ್ರ' ಕಾರ್ಯಕ್ರಮದಡಿ ರೂ. 1,00,000/- ಗಳನ್ನು (ಒಂದು ಲಕ್ಷ ರೂ) ಯುವ ಸಬಲೀಕರಣಾ ಮತ್ತು ಕ್ರೀಡಾ ಇಲಾಖೆ ವತಿಯಿಂದ ವಿಶೇಷ ಕ್ರಮವಾಗಿ ಒದಗಿಸಲಾಗುವುದು. ಹಾಗೆಯೇ ಮುಂಬರುವ ದಿನಗಳಲ್ಲಿ ನಗರಸಭೆಗೆ ಬರುವ ಅನುಧಾನದಲ್ಲಿಯು ಸಹ ಆದ್ಯತೆ ಮೇರೆಗೆ ಆಧುನಿಕ ವ್ಯಾಯಾಮ ಮತ್ತು ದೈಹಿಕ ತರಬೇತಿ ಸಾಮಗ್ರಿಗಳನ್ನು ಅಳವಡಿಸಲು ಕ್ರಮವಹಿಸಲಾಗುತ್ತದೆ.

ಸಂಖ್ಯೆ: ನಅಇ 240 ಜಿಇಎಲ್ 2026 (ಇ)

**(ಹೆಚ್. ಸಿ. ಬಾಲಕೃಷ್ಣ)**
ಪೌರಾಡಳಿತ ಸಚಿವರು.